11:30 ಪಿ.ಎಂ.

ಶ್ರೀ ಜಗದೀಶ್ ಶೆಟ್ಟರ್ :- ಇದು ಬಹಳ ಸುಲಭವಾದ ಪ್ರಶ್ನೆ. ಕೇಂದ್ರ ಸರಕಾರದಿಂದ ರಾಜ್ಯಕ್ಕೆ ಎಷ್ಟು ಹಣ ಬಂದಿದೆ? ಅದು 2001-02ನೇ ಸಾಲಿನಲ್ಲಿ ಬಂದ ಹಣ ಎಷ್ಟು ಎಂದು ಕೇಳಿದ್ದೇನೆ. ನಮ್ಮ ಭಾಗದಲ್ಲಿ ಈ ವಾರದಲ್ಲಿ ಮಳೆ ಬಂದು ರೈತರು ಸಂತೋಷಪಡುತ್ತಾರೆ ಎಂದು ಭಾವಿಸಿದ್ದೆ. ಆದರೆ ನಮ್ಮ ಅನಿಸಿಕೆಯಂತೆ ಮಳೆಯಾಗಲಿಲ್ಲ. ಬರಗಾಲ ಪರಿಸ್ಥಿತಿಯನ್ನು ಎದುರಿಸಲು ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆಂಬುದಕ್ಕೆ ವಿವರಗಳನ್ನು ಕೇಳಿದ್ದೇನೆ. ಕಳೆದ ವರ್ಷದಲ್ಲಿ ಬಂದಂಥ ಹಣವನ್ನು ಕೂಡ ನೀವು ಖರ್ಚು ಮಾಡಿಲ್ಲ. ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಬಂದು ಧಾನ್ಯಗಳನ್ನು ಖರ್ಚು ಮಾಡಿಲ್ಲ. ಇದು ಬಹಳ ಮಹತ್ವದ ವಿಚಾರ. ನಮ್ಮಲ್ಲಿ ಬಹಳ ಭೀಕರವಾದ ಬರಗಾಲ ಇದೆ.

ಅಧ್ಯಕ್ಷರು :- ಮುಂದಿನ ವಾರದಲ್ಲಿ ನಾನೇ ಮುಂದಾಗಿ ನಿಮಗೆ ಆ ಉತ್ತರಗಳನ್ನು ತರಿಸಿ ಕೊಡುತ್ತೇನೆ. ಮಾನ್ಯ ಮಂತ್ರಿಯವರಿಗೆ ಹೇಳಿ ಕಳುಹಿಸುತ್ತೇನೆ. ಇವೊತ್ತಿನ ಪ್ರಶ್ನೆಗಳ ಪಟ್ಟಿಯಲ್ಲಿ ಗ್ರೂಪ್‌ನಲ್ಲಿ ಕಂದಾಯ ಇಲಾಖೆ ಬಂದಿಲ್ಲ. ಹಾಗಾಗಿ ಅವರು ಉಪಸ್ಥಿತರಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಇದು ಬರಗಾಲ ಕುರಿತಾದ ಪ್ರಶ್ನೆಯಾಗಿದ್ದರಿಂದ ನಾನು ಒತ್ತಾಯ ಮಾಡುತ್ತಿದ್ದೇನೆ. ಬೇರೆ ವಿಷಯಗಳಾಗಿದ್ದಲ್ಲಿ ನಾನು ಒತ್ತಾಯಿಸುತ್ತಿರಲಿಲ್ಲ.

ಅಧ್ಯಕ್ಷರು :- ನಾನು ಸಾಯಂಕಾಲದ ಒಳಗಾಗಿ ಅವರಿಗೆ ಫೋನ್ ಮಾಡಿ ವಿಚಾರ ತಿಳಿಸುತ್ತೇನೆ.

ಹುಣಸೂರು ದೇವರಾಜ ಅರಸ್ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವುದು

250 (2014) ಶ್ರೀ ಪಾಪಣ್ಣ ವಿ. (ಹುಣಸೂರು) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಣಸೂರು ಪಟ್ಟಣದಲ್ಲಿ ದೇವರಾಜ ಅರಸ್ ಪ್ರಥಮ ದರ್ಜೆ ಕಾಲೇಜು ಕಳೆದ ಹತ್ತು ವರ್ಷದಿಂದಲೂ ಕಟ್ಟಡ ಹಣ ಅನುದಾನವಿಲ್ಲದೆ ಕಟ್ಟಡ ಅರ್ಧಕ್ಕೆ ನಿಂತಿರುವುದು ನಿಜವಲ್ಲವೆ;

ಆ) ಸರ್ಕಾರದಿಂದ ಈ ಕಟ್ಟಡಕ್ಕೆ ಹುಡ್ಕೊ ನೆರವಿನಿಂದ ಈ ಹಿಂದೆ 40 ಲಕ್ಷ ರೂ.ಗಳು ನೀಡಲು ನಿರ್ಧರಿಸಲಾಗಿತ್ತೇ;

ಇ) ಹಾಗಿದ್ದಲ್ಲಿ, ಕಟ್ಟಡ ಪೂರ್ಣಗೊಳಿಸಲು ಹಣ ಬಿಡುಗಡೆ ಮಾಡದೇ ಇರಲು ಕಾರಣವೇನು;

ಈ) ದಿವಂಗತ ಧೀಮಂತ ನಾಯಕ ದೇವರಾಜ ಅರಸ್‌ರವರ ಹೆಸರಿನಲ್ಲಿ ಕಟ್ಟುತ್ತಿರುವ ಕಟ್ಟಡವನ್ನು ಪೂರ್ಣಗೊಳಿಸಲಾಗುವುದೇ?

ಮಾನ್ಯ ಡಾ|| ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು.

ಇ) ಹುಡ್ಕೋ ಸಂಸ್ಥೆಯಿಂದ ಪಡೆಯುವ ಸಾಲಕ್ಕೆ ಸರಕಾರದ ಖಾತರಿ ನೀಡುವ ಸರ್ಕಾರಿ ಆದೇಶವನ್ನು ಈಗಾಗಲೇ ಹೊರಡಿಸಲಾಗಿದೆ. ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹೌದು.

ಶ್ರೀ ವಿ. ಪಾಪಣ್ಣ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಹುಣಸೂರು ಪಟ್ಟಣದಲ್ಲಿ ದಿವಂಗತ ದೇವರಾಜ ಅರಸ್ ಪ್ರಥಮ ದರ್ಜೆ ಕಾಲೇಜು ಕಳೆದ ಹತ್ತು ವರ್ಷಗಳಲ್ಲಿ ಕಟ್ಟಡಕ್ಕೆ ಹಣವಿಲ್ಲದೆ, ಅನುದಾನವಿಲ್ಲದೆ ಕಟ್ಟಡ ಅರ್ಧಕ್ಕೆ ನಿಂತಿರುವುದು ನಿಜವಲ್ಲವೇ ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರದಲ್ಲಿ ಹೇಳಿದ್ದಾರೆ. ಹತ್ತಾರು ವರ್ಷಗಳಿಂದ ರಾಜ್ಯ ಹೆದ್ದಾರಿಯಲ್ಲಿ ಧೀಮಂತ ನಾಯಕ ದೇವರಾಜ ಅರಸರ ಹೆಸರಿನ ಕಾಲೇಜು ಕಟ್ಟಡ ಹಣದ ಅನುದಾನವಿಲ್ಲದೆ ನಿಂತಿರುವುದು ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಹಾಗಿದ್ದಲ್ಲಿ ಹಣ ಬಿಡುಗಡೆ ಮಾಡದೇ ಇರುಲು ಕಾರಣವೇನೆಂದರೆ, ಹುಡ್ಕೋ ಸಂಸ್ಥೆಯಿಂದ ಪಡೆಯುವ ಸಾಲಕ್ಕೆ ಸರಕಾರದ ಖಾತ್ರಿ ನೀಡುವ ಸರಕಾರಿ ಆದೇಶವನ್ನು ಈಗಾಗಲೇ ಹೊರಡಿಸಲಾಗಿದೆ; ಸದರಿ ವಿಷಯವು ಸರಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಅದಕ್ಕೆ ಹಣ ಬಿಡುಗಡೆ ಮಾಡಲು ಮಂಜೂರಾತಿ ಕೊಡುತ್ತೇವೆ ಎನ್ನುವಂಥಾದ್ದು ಮಾನ್ಯ ಮಂತ್ರಿಗಳು ಹೇಳಲಿಲ್ಲ. ಯಾವಾಗ ಕಟ್ಟಡವನ್ನು ಪೂರ್ಣಗೊಳಿಸುತ್ತೀರಿ ಎಂದರೆ, ಅದಕ್ಕೆ ಒಂದು ಅವಧಿಯನ್ನು ಕೂಡ ಹೇಳಲಿಲ್ಲ. ಕಳೆದ ಅಧಿವೇಶನದಲ್ಲಿಯೂ ಕೂಡ ಅದೇ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು ಮತ್ತು ನಾನು ಅವರಿಗೆ ಮನವಿ ಮಾಡಿಕೊಂಡಿದ್ದೆನು. ರಾಜ್ಯ ಹೆದ್ದಾರಿಯಲ್ಲಿ ದೇವರಾಜ ಅರಸರ ಒಂದು ಕಟ್ಟಡವನ್ನು ಕಟ್ಟದೆ ಅರ್ಧಕ್ಕೆ ನಿಂತಿದೆ, ನೋಡಿದವರೆಲ್ಲರೂ ದೇವರಾಜ ಅರಸರು ಧೀಮಂತ ನಾಯಕರು ಹಾಗೂ ರಾಜ್ಯದ ಮುಖ್ಯಮಂತ್ರಿಯಾಗಿ ಹೆಸರಾದವರು ಅವರ ಹೆಸರಿನ ಕಟ್ಟಡ ಹೀಗೆ ಅರ್ಧಕ್ಕೆ ನಿಂತಿದೆಯಲ್ಲಾ ಎಂದು ಮನವಿ ಮಾಡಿದಾಗ ಆದಷ್ಟು ಶೀಘ್ರದಲ್ಲಿಯೇ ಮಾಡುತ್ತೇವೆಂದು ಒಂದು ಆಶ್ವಾಸನೆ ಕೊಟ್ಟಿದ್ದರು. ಈಗ ಕಟ್ಟಡವನ್ನು ಯಾವಾಗ ಪೂರ್ಣಗೊಳಿಸುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕೆಂದು ತಮ್ಮ ಮೂಲಕ ನಾನು ಕೇಳಬಯಸುತ್ತೇನೆ.

ಡಾ|| ಜಿ. ಪರಮೇಶ್ವರ :- ಸನ್ಮಾನ್ಯ ಅಧ್ಯಕ್ಷರೇ, ಹುಣಸೂರಿನಲ್ಲಿ ಇರತಕ್ಕಂಥ ದೇವರಾಜ ಅರಸು ಪ್ರಥಮ ದರ್ಜೆ ಕಾಲೇಜು 1971ರಲ್ಲಿ ಪ್ರಾರಂಭವಾಗಿ ಆ ಕಟ್ಟಡ ಕಟ್ಟಬೇಕೆಂದು ಹೇಳಿ 1991ರಲ್ಲಿ ಅದಕ್ಕೆ ಪ್ಲಾನ್ ಮಾಡಿ ಎಸ್ಟಿಮೇಟ್ ಮಾಡಿ ಸುಮಾರು 62 ಲಕ್ಷ ರೂಪಾಯಿಗಳಿಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ನ್ನು ಕೂಡ ಕೊಟ್ಟಿದೆ. ಈಗಾಗಲೇ ಅಲ್ಲಿ 35 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಹಂತಕ್ಕೆ ಆ ಕಟ್ಟಡವನ್ನು ತಂದಿದ್ದಾರೆ. ಅದಾದಮೇಲೆ ಕಟ್ಟಡದ ಕೆಲಸ ಹಣದ ಕೊರತೆ ಇದೆ ಎಂದು ಹೇಳಿ ಮುಂದುವರಿಯಲಿಲ್ಲ. ಈಗಾಗಲೇ ಮಾನ್ಯ ಸದಸ್ಯರಿಗೆ ಕಳೆದ ಅಧಿವೇಶನದ ವೇಳೆಯಲ್ಲಿ ಆ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ನಾವು ಹುಡ್ಕೋ ನೆರವಿನಿಂದ ರಾಜ್ಯದಲ್ಲಿ ಇರತಕ್ಕಂಥ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ಯಾವುವು ಅರ್ಧವಾಗಿವೆ ಮತ್ತು ಯಾವುವು ಕಟ್ಟಡವೇ ಇಲ್ಲ, ಎಲ್ಲದಕ್ಕೂ ಕೂಡ ಒಂದು ಕಾಂಪ್ರಹೆನ್ಸಿವ್ ಆಗಿ ಪ್ರಾಜೆಕ್ಟ್‌ನ್ನು ಮಾಡಿ, ಸುಮಾರು 23 ಕೋಟಿ ರೂಪಾಯಿಗಳ ಸಾಲವನ್ನು ಹುಡ್ಕೋದಿಂದ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿ ಅದಕ್ಕೇ ಈಗಾಗಲೇ ಸರಕಾರವು ಒಂದು ಗ್ಯಾರಂಟಿಯನ್ನು ಕೂಡ ಕೊಟ್ಟಿದೆ. ಅದಕ್ಕೆ ಪ್ಲಾನ್, ಎಸ್ಟಿಮೇಟ್ ಎಲ್ಲವನ್ನೂ ಕೂಡ ಮತ್ತೊಂದು ಸಾರಿ ರಿವೈಸ್ ಮಾಡುವ ಪ್ರಕ್ರಿಯೆಯನ್ನು ಕೂಡ ಮಾಡಿದ್ದೇವೆ. ಮಾನ್ಯ ಶಾಸಕರ ಗಮನಕ್ಕೆ ತರತಕ್ಕಂಥಾದ್ದು ಏನೆಂದರೆ ಎಸ್ಟಿಮೇಟ್ ಇದ್ದಂಥಾದ್ದು 62 ಲಕ್ಷ ರೂಪಾಯಿಗಳು. ಈಗ ಅದು 15 ಪರ್‌ಸೆಂಟ್‌ನಂತೆ

ರಿವೈಸ್ಡ್ ಎಸ್ಟಿಮೇಟ್ ಆಗಿ ಹೆಚ್ಚಾಗಿರುವುದರಿಂದ 40 ಲಕ್ಷ ರೂಪಾಯಿಗಳನ್ನು ನಾವು ಅಲೋಕೇಷನ್ ಮಾಡಿದ್ದೇವೆ. ಅದು ಶೀಘ್ರದಲ್ಲಿಯೇ ಬಹುಶಃ ಈ ತಿಂಗಳು, ಒಂದು ತಿಂಗಳೊಳಗಾಗಿ ಹಣವನ್ನು ಅದಕ್ಕೆ ಬಿಡುಗಡೆ ಮಾಡುತ್ತೇವೆ.

ಶ್ರೀ ವಿ. ಪಾಪಣ್ಣ :- ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಮಾನ್ಯ ಸಚಿವರು ಹೇಳಿದಂಥಾದ್ದು ಮತ್ತು ಅನಂತರ ಮಾಡಿದಂಥಾದ್ದು ಹುಡ್ಕೋ ನೆರವನ್ನು ಪಡೆದು ರಾಜ್ಯದಲ್ಲಿನ ಕಾಲೇಜು ಕಟ್ಟಡಗಳನ್ನು ಕಟ್ಟುವಂಥಾದ್ದು ಮಾಡಲು ವ್ಯವಸ್ಥೆ ಮಾಡಿದ್ದಕ್ಕಾಗಿ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಆದರೆ ತ್ವರಿತಗತಿಯಲ್ಲಿ ಏನು ಸರಕಾರದಲ್ಲಿ ಈ ವಾರ ಮೀಟಿಂಗ್ ಮಾಡಬೇಕಾಗಿತ್ತು, ಅದು ಮುಂದಿನ ವಾರಕ್ಕೆ ಹೋಯಿತು, ಅನಂತರ ಮತ್ತೆ ಎರಡು ಮೂರು ವಾರಗಳು ಮುಂದಕ್ಕೆ ಹೋಗಿ ವಿಳಂಬವಾಗುತ್ತಿದೆ ಎಂಬ ಮಾಹಿತಿ ನನಗೆ ಬಂದಿದೆ. ದಯಮಾಡಿ ಕಟ್ಟಡದ ಕೆಲಸವನ್ನು ಆದಷ್ಟು ಬೇಗ ಮಾಡಿಸಿಕೊಡಬೇಕೆಂದು ನಾನು ಅವರಲ್ಲಿ ಮೂಲಕ ಮನವಿ ಮಾಡುತ್ತೇನೆ.

ಡಾ॥ ಜಿ. ಪರಮೇಶ್ವರ :- ಮಾನ್ಯ ಅಧ್ಯಕ್ಷರೇ, ಕಾಲೇಜು ಕಟ್ಟಡದ ಕೆಲಸವನ್ನು ಆದಷ್ಟು ಬೇಗ ಮಾಡಿಸುತ್ತೇನೆ.

ಬೆಂಗಳೂರಿನ ವಾಣಿವಿಲಾಸ ಹಾಗೂ ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆಗಳಲ್ಲಿ ರಕ್ತನಿಧಿಯನ್ನು ಪ್ರಾರಂಭಿಸುವುದು

251 (666) ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ವಾಣಿವಿಲಾಸ ಹಾಗೂ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗಳಲ್ಲಿ ರಕ್ತ ನಿಧಿಯನ್ನು ಪ್ರಾರಂಭಿಸಲಾಗಿದೆಯೇ;

ಆ) ಈ ಆಸ್ಪತ್ರೆಗಳಿಗೆ ಪ್ರತಿದಿನ ಬೇಕಾಗುವ ಸರಾಸರಿ ರಕ್ತದ ಪ್ರಮಾಣವೆಷ್ಟು;

ಇ) ಈ ರಕ್ತನಿಧಿಯನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ಆಸ್ಪತ್ರೆಗಳಲ್ಲಿ ರಕ್ತನಿಧಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಮಾನ್ಯ ಡಾ॥ ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ವಾಣಿವಿಲಾಸ ಆಸ್ಪತ್ರೆಗೆ ಪ್ರತಿದಿನ ಸರಾಸರಿ 15 ಬಾಟಲಿ ರಕ್ತ ಬೇಕಾಗುತ್ತದೆ. ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಪ್ರತಿದಿನ 7 ರಿಂದ 10 ಬಾಟಲಿ ರಕ್ತ ಬೇಕಾಗುತ್ತದೆ.

ಇ) 1. ವಾಣಿವಿಲಾಸ ಆಸ್ಪತ್ರೆಯ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ಇರುವುದರಿಂದ ಬೇರೆ ರಕ್ತನಿಧಿ ಅವಶ್ಯಕತೆ ಸಧ್ಯಕ್ಕೆ ಕಂಡು ಬರುವುದಿಲ್ಲ.

2. ಬೌರಿಂಗ್ ಆಸ್ಪತ್ರೆಯಲ್ಲಿ ಕಟ್ಟಡ ಸಿದ್ಧವಾಗಿದೆ, ಉಪಕರಣಗಳನ್ನು ಅಳವಡಿಸಲಾಗಿದೆ. ಔಷಧ ನಿಯಂತ್ರಣಾಧಿಕಾರಿಗಳ ಪರವಾನಗಿ ಕೋರಲಾಗಿದೆ.

ಈ) ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ರಕ್ತನಿಧಿ ಕೊಠಡಿಯ ಹವಾ ನಿಯಂತ್ರಣ, ವಿಭಾಗೀಯ ಗೋಡೆ ಇತ್ಯಾದಿಗಳನ್ನು ಅಳವಡಿಸಿ ಆದಷ್ಟು ಜಾಗ್ರತೆ ರಕ್ತ ನಿಧಿ ಘಟಕವನ್ನು ಪ್ರಾರಂಭಿಸಲಾಗುವುದು.